Cadabam's

anunitha
Centre for Alcohol and Drug De-addiction and Rehabilitation
Licensed by Government of Karnataka

Publication - Kannada Prabha

Date 02/12/2013
Page No 04



ಕನ್ನಡಪ್ರಭ

ನಗರ

ಬೆಂಗಳೂರು | ಸೋಮವಾರ 2 | ಡಿಸೆಂಬರ್ 2013

# ಜಿಲ್ಲೆಗೊಂದು ಮಾನಸಿಕ ಚಿಕಿತ್ಸಾ ಕೇಂದ್ರ: ಸಚಿವ ಖಾದರ್

ಕ.ಪ್ರ.ವಾರ್ತೆ | ಬೆಂಗಳೂರು | ಡಿ. 1

ಮಾನಸಿಕ ರೋಗಿಗಳಿಗೆ ಶೀಘ್ರ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಪ್ರತಿ ಜಿಲ್ಲೆಯಲ್ಲಿ ಮಾನಸಿಕ ಚಿಕಿತ್ಸೆ ಹಾಗೂ ಪುನರ್ವಸತಿ ಕೇಂದ್ರ ಸ್ಥಾಪಿಸುವುದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ.ಖಾದರ್ ತಿಳಿಸಿದ್ದಾರೆ.

ಕಡಬಂ ಸಂಸ್ಥೆಯ ವತಿಯಿಂದ ಅನುನಿತ ಮದ್ಯಪಾನ ಹಾಗೂ ಡ್ರಗ್ ವ್ಯಸನಮುಕ್ತ ಕೇಂದ್ರ ಹಾಗೂ ಪುನರ್ವಸತಿ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು.




ಪುನರ್ವಸತಿ ಕೇಂದ್ರ ಉದ್ಘಾಟಿಸುತ್ತಿರುವ ರಾಜ್ಯಪಾಲ ಹಂಸರಾಜ್ ಭಾರದ್ವಾಜ್, ಪುಷ್ಪಲತಾ ಭಾರದ್ವಾಜ್, ತಮಿಳುನಾಡು ರಾಜ್ಯಪಾಲ ಡಾ.ಕೆ.ರೋಸಯ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ.ಖಾದರ್ ಇದ್ದರು.

- ಕಡಬಂ ಸಂಸ್ಥೆಯ ಡ್ರಗ್ ವ್ಯಸನಮುಕ್ತ, ಪುನರ್ವಸತಿ ಕೇಂದ್ರ ಉದ್ಘಾಟನೆ

ಪ್ರತಿ ಜಿಲ್ಲಾ ಆಸ್ಪತ್ರೆಗಳಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಪುನರ್ವಸತಿ ಕೇಂದ್ರ ಆರಂಭಿಸಲಾಗುವುದು. ಇದಕ್ಕಾಗಿ ₹18 ಲಕ್ಷ ಅನುದಾನ ಬಿಡುಗಡೆ ಮಾಡಲಾಗುವುದು. ಆಸ್ಪತ್ರೆಗಳಲ್ಲಿ ಸ್ಥಳಾವಕಾಶ ಇಲ್ಲ ಎಂದರೆ ಬೇರೆಡೆ ಕೇಂದ್ರ ಸ್ಥಾಪಿಸಲು ₹20 ಸಾವಿರ ಬಾಡಿಗೆಯಂತೆ ಅನುದಾನ ನೀಡಲಾಗುವುದು ಎಂದರು.

ತಮಿಳುನಾಡು ರಾಜ್ಯಪಾಲ ಡಾ. ಕೆ.ರೋಸಯ್ಯ ಮಾತನಾಡಿ, ಡ್ರಗ್ ಸೇವನೆ ಹಾಗೂ ಮದ್ಯಪಾನ ಮನುಷ್ಯನ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕುಗ್ಗಿಸುತ್ತದೆ. ಹೆಚ್ಚಾಗಿ ಇಂತಹ ವ್ಯಸನಗಳಿಗೆ ಯುವಕರೆ ಬಲಿಯಾಗುತ್ತಿರುವುದರಿಂದ ಮುಂದೆ ಇದು ಸಂಪೂರ್ಣ ಸಮಾಜವನ್ನೇ ಬಲಿತೆಗೆದುಕೊಳ್ಳುತ್ತದೆ ಎಂದರು.

ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಮಾತನಾಡಿ, ಜನರಿಗೆ ಅಗತ್ಯ ಆರೋಗ್ಯ ಸೇವೆ ಒದಗಿಸುವುದು ಸರ್ಕಾರದ ಪ್ರಧಾನ ಆದ್ಯತೆಯಾಗಬೇಕು. ಸಮಾಜವನ್ನು ವ್ಯಸನ ಮುಕ್ತಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಗಂಭೀರ ಗಮನಹರಿಸಬೇಕು ಎಂದರು.